**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರೋಹಿತ ಶಿಂಧೆ | ಸಿ.ಡಬ್ಲೂ-8 |
| ತಂದೆಯ ಹೆಸರು | : | ಶಿವಾಜಿ | ಪಿ.ಡಬ್ಲೂ-7 |
| ವಯಸ್ಸು | : | 26 ವರ್ಷ | |
| ಉದ್ಯೋಗ | : | ಬ್ಯುಸಿನೇಸ್ | |
| ವಾಸ ಸ್ಥಳ | : | ಧಾರವಾಡ. | |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ **14-08-2026**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ದಿಃ 29-05-2025 ರಂದು ನಾನು ಹೆಬ್ಬಳ್ಳಿಯಿಂದ ಧಾರವಾಡಕ್ಕೆ ನನ್ನ ಬೈಕ ಮೇಲೆ ಬರುವಾಗ ಮಣಿಕಂಠ ನಗರದ ತಾಯಮ್ಮ ಕಲ್ಯಾಣ ಮಂಟಪ ಹತ್ತಿರ ಬರುವಾಗ ರಾತ್ರಿ 10.15 ರ ಸಮಯದಲ್ಲಿ ನನ್ನ ಎದುರುಗಡೆ ರಸ್ತೆಯಿಂದ ಬರುತ್ತಿದ್ದ ಒಬ್ಬ ಬೈಕ ಚಾಲಕ ಅತೀ ವೇಗವಾಗಿ ತನ್ನ ಬೈಕನ್ನು ಚಲಾಯಿಸಿಕೊಂಡು ಬಂದು ಒಬ್ಬ ಪಾದಚಾರಿಗೆ ಡಿಕ್ಕಿ ಹೊಡೆದ. ಆ ಪಾದಚಾರಿ ಕೆಳಗಡೆ ಬಿದ್ದ ನಂತರ ನಾನು ಮತ್ತು ಉಳಿದ ಜನ ಸೇರಿಕೊಂಡು ಆತನನ್ನು ಮೇಲೆ ಎಬ್ಬಿಸಿ ಆತನಿಗೆ ನೀರು ಕುಡಿಸಿ ಅಂತಾ ಹೇಳುತ್ತಿದ್ದೆವು ಆ ಪಾದಚಾರಿಯ ತಲೆಗೆ ಬಲವಾಗಿ ಏಟಾಗಿತ್ತು ಆತ ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದ. ಆತನಿಗೆ ಅಪಘಾತ ಪಡಿಸಿದ ಬೈಕ ನಂ ಕೆಎ 25 ಅಂತಾ ಇದ್ದು ಮುಂದಿನ ನಂಬರ ನೆನಪಿಲ್ಲ. ಅಪಘಾತ ಪಡಿಸಿದ ವ್ಯಕ್ತಿಯ ಹೆಸರು ಏನಿತ್ತು ಎಂದು ಗೊತ್ತಾಗಿಲ್ಲ. ಅಪಘಾತ ಪಡಿಸಿದ ಬೈಕ ಚಾಲಕನನ್ನು ನಾನು ನೋಡಿದ್ದೇನೆ. ಸದರಿ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾನೆ ಅಂತಾ ಸಾಕ್ಷಿದಾರ ನೋಡಿ ನಿಖರವಾಗಿ ಗುರುತಿಸಿದ್ದಾನೆ. ಸ್ವಲ್ಪ ದಿನದ ನಂತರ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿ ರಾಕೇಶ ಇತನ ತಂದೆ ಅಂತಾ ಗೊತ್ತಾಯಿತು.

ದಿಃ 15-06-2025 ರಂದು ಗಾಯಾಳು ಚಿಕಿತ್ಸೆ ಫಲಕಾರಿಯಾಗದೇ ಮೃತನಾಗಿದ್ದಾನೆ ಅಂತಾ ಗೊತ್ತಾಯಿತು. ಪೊಲೀಸರು ಠಾಣೆಗೆ ನನ್ನನ್ನು ಕರೆಸಿದ್ದರು. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಪೊಲೀಸರಿಗೆ ನಾನು ಮರುಹೇಳಿಕೆ ನಾನು ನೀಡಿಲ್ಲ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲು : ಮಾನ್ಯ ಹಿಸಸಅವರಿಂದ**

ಆ ದಿನ 1 ನೇ ಆರೋಪಿ ಮೋಟರ ಸೈಕಲ ನಂ.ಕೆಎ.25/ಇ ಎಕ್ಸ -2094 ನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಧಾರವಾಡ ಕಡೆಯಿಂದ ಹೆಬ್ಬಳ್ಳಿಯ ರಸ್ತೆ ಕಡೆಗೆ ಚಲಾಯಿಸುತ್ತಿದ್ದ ಎಂದರೆ ಸರಿ. ಗಾಯಾಳು ವ್ಯಕ್ತಿ ನನ್ನ ಗೆಳೆಯನ ತಂದೆ ಅಂತಾ ಆತನ ಮರಣದ ನಂತರ ಗೊತ್ತಾಯಿತು. ನಾನು ಸದರಿ ಅಪಘಾತ ನೋಡಿದ್ದೆ ಆದರೆ ಗಾಯಾಳು ಶ್ರೀಧರನ ತಂದೆ ಅಂತಾ ಗೊತ್ತಾಗದೇ ಇರದೇ ಇರುವುದರಿಂದ ಮೊದಲು ನಾನು ಈ ಬಗ್ಗೆ ಹೇಳಿಲ್ಲ ಅಂತಾ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

ದಿಃ 23-07-2025 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಅಪಘಾತ ಪಡಿಸಿದ ಬೈಕ ನಂ ಕೆಎ.25/ಇ ಎಕ್ಸ -2094 ನ್ನು ಠಾಣೆಯಲ್ಲಿ ನನಗೆ ಹಾಗೂ ಚಾಸಾ-9 ಮತ್ತು 10 ರವರಿಗೆ ತೋರಿಸಿದ್ದಾರೆ ಎಂದರೆ ಸರಿ. ದಿಃ 29-07-2025 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಅಪಘಾತ ಪಡಿಸಿದ ಬೈಕನ ಚಾಲಕನನ್ನು

ತೋರಿಸಿದ್ದಾರೆ ಎಂದರೆ ಸರಿ. ನಾನು ಅಪಘಾತ ಪಡಿಸಿದ ಬೈಕ ಹಾಗೂ ಚಾಲಕನನ್ನು ನೋಡಿ ಗುರುತಿಸಿದ ಬಗ್ಗೆ ಹೇಳಿಕೆಗಳನ್ನು ನೀಡಿದ್ದೇನೆ ಎಂದರೆ ಸರಿ.

**ಪಾಟೀಸವಾಲು : ಆರೋಪಿ ಪರ ಶ್ರೀ. ಎಮ್ ಜಿ ಆರ್ ವಕೀಲರಿಂದ**

ದಿಃ 29-05-2025 ರಂದು ನಾನು ಹೆಬ್ಬಳ್ಳಿಯಿಂದ ಧಾರವಾಡಕ್ಕೆ ನನ್ನ ಬೈಕ ಮೇಲೆ ಬರುವಾಗ ಮಣಿಕಂಠ ನಗರದ ತಾಯಮ್ಮ ಕಲ್ಯಾಣ ಮಂಟಪ ಹತ್ತಿರ ಬರುವಾಗ ರಾತ್ರಿ 10.15 ರ ಸಮಯದಲ್ಲಿ ನನ್ನ ಎದುರುಗಡೆ ರಸ್ತೆಯಿಂದ ಬರುತ್ತಿದ್ದ ಒಬ್ಬ ಬೈಕ ಚಾಲಕ ಅತೀ ವೇಗವಾಗಿ ತನ್ನ ಬೈಕನ್ನು ಚಲಾಯಿಸಿಕೊಂಡು ಬಂದು ಒಬ್ಬ ಪಾದಚಾರಿಗೆ ಡಿಕ್ಕಿ ಹೊಡೆದ, ಆ ಪಾದಚಾರಿ ಕೆಳಗಡೆ ಬಿದ್ದ ನಂತರ ನಾನು ಮತ್ತು ಉಳಿದ ಜನ ಸೇರಿಕೊಂಡು ಆತನನ್ನು ಮೇಲೆ ಎಬ್ಬಿಸಿ ಆತನಿಗೆ ನೀರು ಕುಡಿಸಿ ಅಂತಾ ಹೇಳುತ್ತಿದ್ದೆವು ಆ ಪಾದಚಾರಿಯ ತಲೆಗೆ ಬಲವಾಗಿ ಏಟಾಗಿತ್ತು ಆತ ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಬೈಕ ಚಾಲಕನನ್ನು ನಾನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪೊಲೀಸರು ಠಾಣೆಗೆ ನನ್ನನ್ನು ಕರೆಸಿದ್ದರು, ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 23-07-2025 ರಂದು ಹಾಗೂ 29-07-2025 ರಂದು ಪೊಲೀಸರು ನನಗೆ, ಚಾಸಾ-9 ಹಾಗೂ 10 ರವನ್ನು ಠಾಣೆಗೆ ಕರೆಯಿಸಿ ಅಪಘಾತ ಪಡಿಸಿದ ಬೈಕ ನಂ ಕೆಎ.25/ಇ ಎಕ್ಸ -2094 ನ್ನು ಠಾಣೆಯಲ್ಲಿ ನನಗೆ ಹಾಗೂ ಚಾಸಾ-9 ಮತ್ತು 10 ರವರಿಗೆ ತೋರಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 29-07-2025 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಅಪಘಾತ ಪಡಿಸಿದ ಬೈಕನ ಚಾಲಕನನ್ನು ತೋರಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತ ಪಡಿಸಿದ ಬೈಕ ಹಾಗೂ ಚಾಲಕನನ್ನು ನೋಡಿ ಗುರುತಿಸಿದ ಬಗ್ಗೆ ಹೇಳಿಕೆಗಳನ್ನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶ್ರೀಧರನ ಮಗ ನನ್ನ ಸ್ನೇಹಿತನಾಗಿರುವುದರಿಂದ ಆತನ ಕುಟುಂಬದವರಿಗೆ ಪರಿಹಾರ ಧನ ಸಿಗಲಿ ಅಂತಾ ಹೇಳಿ 1 ನೇ ಆರೋಪಿ ಅಪಘಾತ ಪಡಿಸಿದ್ದಾನೆ ಅಂತಾ ನಾನು ಘಟಣೆಯನ್ನು ನೋಡಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀಧರ ಆ ದಿನ ಪುಟ್ ಪಾತ ಮೇಲೆ ನಡೆದುಕೊಂಡು ಹೋಗುತ್ತಿದ್ದ. ಶ್ರೀಧರ ಅಪಘಾತದ ಬಗ್ಗೆ ಹೇಳಿದ್ದರಿಂದ ನಾನು ಪೊಲೀಸರ ಮಾತು ಕೇಳಿ ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿದ್ದೇನೆ ಎಂದರೆ ಸರಿಯಲ್ಲ. ಇದೇ ದಿನ ಮೊದಲ ಬಾರಿಗೆ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.